ಶ್ರೀ ಬಿ.ಎಂ. ಇದಿನಬ್ಬ : 1990-91 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು 10ನೇ ಸ್ಥಾನದಲ್ಲಿದೆ ಎಂದು ಹೇಳಿದ್ದಾರೆ. ನಿಜವಾಗಿಯೂ ದಕ್ಷಿಣ ಕನ್ನಡ ಸಣ್ಣ ಉಳಿತಾಯದಲ್ಲಿ ಮೊದಲಿನಿಂದಲೂ ಬಹಳ ಮುಂದೆ ಇರತಕ್ಕಂಥ ಜಿಲ್ಲೆ. ಅದು ಯಾವಾಗಲೂ ಪ್ರಥಮ ಅಥವಾ ದ್ವಿತೀಯ ಸ್ಥಾನದಲ್ಲಿರುವಂಥ ಜಿಲ್ಲೆ. ಆದರೆ ಈಗ ಹತ್ತನೇ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಉಳಿತಾಯದ ಪ್ರಚಾರ ನಿಜವಾಗಿಯೂ ಬಹಳ ಕೆಳಮಟ್ಟದಲ್ಲಿ ಇದೆ ಎನ್ನುವುದು ನನ್ನ ಭಾವನೆಯಾಗಿದೆ. ಆದುದರಿಂದ ಇದನ್ನು ಅತ್ಯಂತ ಜೋರಾಗಿ,ತುತ್ತ ತುದಿಗೆ ಏರಿಸಲು ಹೆಚ್ಚು ಪ್ರಗತಿ ಕಾಣುವಂತೆ ಮಾಡಲು ಸೂಕ್ತ ವ್ಯವಸ್ತೆ ಮತ್ತು ಆದೇಶವನ್ನು ನೀಡುತ್ತೀರಾ?

ಶ್ರೀ ಟಿ.ಎಂ. ಮಂಜುನಾಥ್ : ಈ ಸಣ್ಣ ಉಳಿತಾಯದ ಬಗ್ಗೆ ಈಗಾಗಲೇ ಕೆಲವು ಜಿಲ್ಲೆಗಳಲ್ಲಿ ರಿವ್ಯೂ ಮಾಡಿ ಈ ಕಾರ್ಯಕ್ರಮವನ್ನು ಚುರುಕಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಅಲ್ಲಿಗೆ ಹೋಗಿ ಈ ಕಾರ್ಯಕ್ರಮದ ಚಟುವಟಿಕೆಗಳೇನಾದರೂ ಕುಂದಿದ್ದರೆ ಅದನ್ನು ತ್ವರಿತವಾಗಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಲಾಗುತ್ತೆ. ಮತ್ತು ಯಾವರೀತಿಯಲ್ಲಿ ಈ ಕಾರ್ಯಕ್ರಮವನ್ನು ಅನುಸರಿಸಬೇಕೆಂಬುದನ್ನು ನಾವು ಸೂಚಿಸಿದ್ದೇವೆ. ಯೂವುದನ್ನು ಪ್ರೋತ್ಸಾಹದಾಯಕವಾಗಿ ಕೊಡಬೇಕು ಏಜಂಟರನ್ನು ಯಾವರೀತಿಯಾಗಿ ಮಾಡಬೇಕು. ಇತ್ಯಾದಿ ಮುಖ್ಯ ವಿಚಾರಗಳ ಬಗ್ಗೆ ಸೂಚಿಸಿದೆ. ಅಲ್ಲಿ ಸಣ್ಣ ಉಳಿತಾಯದಲ್ಲಿ ಕುಸಿತವಾಗಲು ಮುಖ್ಯವಾದಂಥ ಕಾರಣವೇನೆಂದರೆ, ಅದನ್ನು ಒಟ್ಟಾರೆ ಹೇಳುವುದಾದರೆ, ನಮ್ಮ ರಿಸರ್ವ್ ಬ್ಯಾಂಕ್‌ನವರು ಎರಡು ಬಾರಿ ಈಗಾಗಲೇ ಬಡ್ಡಿ ದರವನ್ನು ಕೆಲವು ಬ್ಯಾಂಕ್‌ಗಳಲ್ಲಿ ಜಾಸ್ತಿ ಮಾಡಿದ್ದಾರೆ. ಆದರೆ ರಾಷ್ಟ್ರೀಯ ಸಣ್ಣ ಉಳಿತಾಯದ ಬಗ್ಗೆ ಇದುವರೆಗೂ ಬಡ್ಡಿಯನ್ನು ಹೆಚ್ಚಿಗೆ ಮಾಡದಿರುವುದರಿಂದ ಡಿಪಾಸಿಟ್ ಕಡಿಮೆ ಆಗಿರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಕಿಂಗ್ ಸಿಸ್ಟಂ ಜಾಸ್ತಿ ಇರುವುದರಿಂದ ಈ ಕೊರತೆಯು ಆಗಿರಬಹುದು. ಮಾನ್ಯ ಮುಖ್ಯಮಂತ್ರಿಯವರು ಈ ಬಡ್ಡಿ ದರದ ವಿಚಾರದಲ್ಲಿ ಈಗಾಗಲೇ ಕೇಂದ್ರ ಸರಕಾರದವರಿಗೆ ಪತ್ರ ಬರೆದು ಸೂಚಿಸಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮವನ್ನು ಅವರು ತೆಗೆದುಕೊಂಡರೆ ಸಣ್ಣ ಉಳಿತಾಯದಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಕ್ಕೆ ಸೇರಿದ ಅಧಿಕಾರಿಗಳು ಹಾಗೂ ನೌಕರರು

2269- ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಮಾರ್ಚ್ ಮಾಹೆಯ ಅಂತ್ಯದವರೆಗೆ ಸರ್ಕಾರದ ನಾನಾ ಇಲಾಖೆಗಳಲ್ಲಿ 'ಎ','ಬಿ','ಸಿ'ಹಾಗೂ 'ಡಿ' ಗುಂಪಿನಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಧಿಕಾರಿಗಳ ನೌಕರರ ಸಂಖ್ಯೆಯೆಷ್ಟು?

ಆ) ಶೇಕಡವಾರಿನಲ್ಲಿ ಮೇಲ್ಕಂಡ ಜಾತಿಗಳ : ವರ್ಗಗಳ ಜನರ ಸಂಖ್ಯೆ ಕಡಿಮೆಯಿದ್ದಲ್ಲಿ ಆ ಹುದ್ದೆಗಳನ್ನು ಯಾವ ರೀತಿ ಭರ್ತಿಮಾಡಲಾಗುವುದು.

ಇ) ಈ ಕೊರತೆಯನ್ನು ಭರ್ತಿ ಮಾಡಲು ತೊಂದರೆಯೋನಾದರೂ ಇದ್ದಲ್ಲಿ ಅದನ್ನು ಸರಿಪಡಿಸಲು ಕಾನೂನಿನ ಮೂಲಕ ತಿದ್ದುಪಡಿ ತಂದು ಪರಿಶಿಷ್ಟ ಜಾತಿ : ವರ್ಗದ ಜನರಿಗೆ ನ್ಯಾಯವನ್ನು ದೊರಕಿಸಿ ಕೊಡಲಾಗುವುದೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 1991ನೇ ಮಾರ್ಚಿ ತಿಂಗಳ ಅಂತ್ಯದವರೆಗಿನ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಆ) ಶೇಕಡಾವಾರಿನಲ್ಲಿ ಈ ಜಾತಿಗಳ ವರ್ಗಗಳ ಜನರ ಸಂಖ್ಯೆಯನ್ನು ಕಾಯ್ದು ಕೊಳ್ಳಲು ಸರ್ಕಾರವು ಸತತ ಪ್ರಯತ್ನ ಮಾಡುತ್ತಲೇ ಇದೆ. ಅವುಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರಿಸಲಾದ ಹುದ್ದೆಗಳಲ್ಲಿ 'ಬ್ಯಾಕ್‌ಲಾಗ್' ಸ್ಥಾನಗಳನ್ನು ವಿಶೇಷ ಪ್ರಯತ್ನದ ಮೂಲಕ ಭರ್ತಿ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಇದಕ್ಕಾಗಿ ಆರ್ಥಿಕ ಮಿತವ್ಯಯದ ಆದೇಶಗಳನ್ನು ಸಡಿಲಗೊಳಿಸಲಾಗಿದೆ ಹಾಗೂ ನೇರ ನೇಮಕಾತಿಯ ಪ್ರತಿಬಂಧಕಾಜ್ಞೆಯನ್ನು ಕೂಡಾ ಸಡಿಲಿಸಿ ಆದೇಶ ಹೊರಡಿಸಲಾಗಿದೆ.

ಯಾವ ಯಾವ ವರ್ಗಗಳಲ್ಲಿ ಶೇಕಡ 15 ಮತ್ತು 3 ಮಟ್ಟ ತಲುಪಿಲ್ಲವೋ ಆ ವರ್ಗಗಳಿಗೆ ನೇರ ನೇಮಕಾತಿ ಮಾಡುವಾಗ ಮೀಸಲಾತಿಯನ್ನು ಶೇಕಡ 20 ಮತ್ತು 5ಕ್ಕೆ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ.

ಇದಲ್ಲದೆ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ 'ಎ' ಮತ್ತು 'ಬಿ'ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದೆ.

ಇ) ಸರ್ಕಾರವು ಈಗಾಗಲೇ ಸಂಬಂಧಪಟ್ಟ ಆದೇಶಕ್ಕೆ ತಿದ್ದುಪಡಿ ಮಾಡಿದೆ ಹಾಗೂ ನಿಯಮಗಳನ್ನು ಹೊರಡಿಸಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, 1991ನೇ ಮಾರ್ಚ್ ಮಾಹೆಯ ಅಂತ್ಯದ ವರೆಗೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಕ್ಲಾಸ್ 1,2,3 ಮತ್ತು ನಾಲ್ಕರ ಗುಂಪಿನಲ್ಲಿ ಸೇವೆಸಲ್ಲಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ, ನೌಕರರ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸೂಕ್ತ ಅಂಕಿಅಂಶಗಳನ್ನು ಕೊಟ್ಟಿಲ್ಲ. ಇದರ ಅರ್ಥ ಏನೆಂದರೆ, ಡಿಪಿಎಆರ್ ಇಲಾಖೆಯವರು ಹರಿಜನ ಗಿರಿಜನರ ಬಗ್ಗೆ ಮಾಹಿತಿಯನ್ನು ಇದುವರೆಗೆ ಸೂಕ್ತ ರೀತಿಯಲ್ಲಿ ಸಂಗ್ರಹಿಸಿಲ್ಲ ಎಂದು ಗೊತ್ತಾಗುತ್ತದೆ. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೆ ಡಿಪಿಎಆರ್ ಇಲಾಖೆಯವರಿಗೆ ಹರಿಜನ ಗಿರಿಜನರ ವಿಚಾರದಲ್ಲಿ ಕೆಲಸ ಮಾಡಲು ಕಾಳಜಿ ಇಲ್ಲ ಎಂದು ವೇದ್ಯವಾಗುತ್ತದೆ.

ಈ ಬಗ್ಗೆ ಸರಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು. ಹಾಗೆಯೇ ಶೇಕಡಾವಾರಿನಲ್ಲಿ ಮೇಲ್ಕಂಡ ಜಾತಿಗಳ ವರ್ಗಗಳ ಜನರ ಸಂಖ್ಯೆ ಕಡಿಮೆಯಿದ್ದಲ್ಲಿ ಆ ಹುದ್ದೆಗಳನ್ನು ಯಾವ ರೀತಿಯಲ್ಲಿ ಭರ್ತಿ ಮಾಡಲಾಗುವುದು ಎಂದು ಕೇಳಿದ್ದಕ್ಕೆ ಯಾವ ಯಾವ ವರ್ಗಗಳಲ್ಲಿ ಶೇಕಡ 15 ಮತ್ತು 3 ಮಟ್ಟ ತಲುಪಿಲ್ಲವೋ ಆ ವರ್ಗಗಳಿಗೆ ನೇರ ನೇಮಕಾತಿ ಮಾಡುವಾಗ ಮೀಸಲಾತಿಯನ್ನು ಶೇಕಡ 20 ಮತ್ತು 5ಕ್ಕೆ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಮೊನ್ನೆ ತಾನೆ ಹಂಗಾಮಿ ಉಪಾಧ್ಯಾಯರುಗಳನ್ನು ಕನ್‌ಫರ್ಮ್ ಮಾಡಿದ್ದಾರೆ. ಅಲ್ಲಿಯೂ ಕೂಡ ಹರಿಜನರ ಕೊರತೆಯಾಗಿದೆ. ಸುಪ್ರೀಮ್ ಕೋರ್ಟ್‌ನಲ್ಲಿ 68 ಸಾವಿರ ಜನ ಹಂಗಾಮಿ ನೌಕರರನ್ನು ಖಾಯಂ ಮಾಡಿದಾಗ ಕೇವಲ ಎರಡೂವರೆ ಸಾವಿರ ಹರಿಜನ-ಗಿರಿಜನರು ಮಾತ್ರ ಖಾಯಂ ಗೊಂಡಿದ್ದಾರೆ. ಆದುದರಿಂದ ವಿಶೇಷವಾಗಿ ಈ ವರ್ಗಗಳ ಜನರ ಕೊರತೆಯಾಗಿರುವುದನ್ನು ಯಾವರೀತಿಯಲ್ಲಿ ತುಂಬುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು. ಇಲ್ಲವಾದರೆ ಖಂಡಿತವಾಗಿ ಸರಕಾರವೇ ಹರಿಜನ ಗಿರಿಜನರಿಗೆ ಅನ್ಯಾಯ

ಮಾಡಿದ ಹಾಗೆ ಆಗುತ್ತದೆ. ಇದರ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು 'ಎ'ಪ್ರಶ್ನೆಗೆ ನಾನು ಈ ರೀತಿಯಾಗಿ ಉತ್ತರವನ್ನು ಕೊಟ್ಟಿರುತ್ತೇನೆ. ಏಕೆಂದರೆ, ಅವರು1991 ರ ಮಾರ್ಚ್ ಅಂತ್ಯದ ವರೆಗೆ ಅಂಕಿಅಂಶಗಳನ್ನು ಕೇಳಿದ್ದಾರೆ. ಈ ಅಂಕಿಅಂಶಗಳನ್ನು ನಾವು ಎಲ್ಲಾ ತಾಲ್ಲೂಕುಗಳಿಂದ ತರಿಸಬೇಕಾಗಿರುವುದರಿಂದ ಅದಕ್ಕೆ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಆ ದೃಷ್ಟಿಯಿಂದ ಸಂಗ್ರಹಣೆ ಮಾಡಲಾಗುತ್ತಿದೆ ಎಂದು ಹೇಳಿದ್ದೇನೆ. 1990ನೇ ಇಸವಿಯ ತನಕದ ವಿವರಗಳು ನಮ್ಮಲ್ಲಿ ಇವೆ. ಮಾನ್ಯ ಸದಸ್ಯರು ಕಳೆದ ಮಾರ್ಚ್ ತಿಂಗಳ ಅಂತ್ಯದವರೆಗೆ ಲೇಟೆಸ್ಟ್ ಮಾಹಿತಿಗಳನ್ನು ಕೇಳಿದ್ದರಿಂದ ಸ್ವಲ್ಪ ಸಮಯಾವಕಾಶ ಬೇಕಾಗುತ್ತದೆ. ಅದನ್ನು ತರಿಸಿ ತಮಗೆ ಒದಗಿಸಿ ಕೊಡುತ್ತೇನೆ. ಏಕೆಂದರೆ, ನಮ್ಮ ಸರಕಾರ ಬಂದಮೇಲೆ ನೇಮಕಾತಿಗಳಲ್ಲಿ ಯಾವ ನೀತಿಯನ್ನು ಅನುಸರಿಸಿದ್ದೇವೆ. ಅದನ್ನು ಪಾಲಿಸಿದ್ದೇವೆಯೋ ಇಲ್ಲವೇ ಎಂಬುದನ್ನು ನಾವು ಗಂಭೀರವಾಗಿ ಇಟ್ಟು ಕೊಂಡಿದ್ದೇವೆ. ಅದನ್ನೆಲ್ಲಾ ಕಲೆಕ್ಟ್ ಮಾಡಬೇಕಾದರೆ ಸಮಯ ಬೇಕಾಗುತ್ತದೆ. ಈ ಅಂಕಿಅಂಶಗಳನ್ನು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟ್‌ನವರು ಕಲೆಕ್ಟ್ ಮಾಡುವುದರಿಂದ ಅದಕ್ಕಾಗಿ ಸಮಯ ಬೇಕಾಗುತ್ತದೆ ಎಂದು ಹೇಳಿದ್ದೇನೆ. ಆದುದರಿಂದ ತಮಗೆ 1990 ರ ವರೆಗಿನ ಮಾಹಿತಿಗಳನ್ನು ಒದಗಿಸಿಕೊಡುತ್ತೇನೆ. ಈ ವರ್ಷ ಅಂದರೆ ಫೈನಾನ್‌ಷಿಯಲ್ ಇಯರ್ ಪೂರ್ತಿಯಾದ ಮೇಲೆ ಇಲಾಖೆಯವರು ಅದನ್ನು ಕಲೆಕ್ಟ್ ಮಾಡುತ್ತಾರೆ. ಅದನ್ನು ತಮಗೆ ಇನ್ನು ಕೆಲವು ದಿವಸಗಳಲ್ಲಿ ತರಿಸಿಕೊಡುತ್ತೇನೆ. ಇನ್ನು ಇನ್ನು ತಮ್ಮ ಎರಡನೇ ಪ್ರಶ್ನೆ ಏನಿದೆ ಅದರ ಬಗ್ಗೆ ಹೇಳುವುದಾದರೆ ಇದರಲ್ಲಿ ಬ್ಯಾಕ್‌ಲಾಗ್ ಏನಿದೆ, ಎಲ್ಲೆಲ್ಲಿ ನಾವು, ಭರ್ತಿ ಮಾಡಿಲ್ಲ ಆ ಬಗ್ಗೆ ಸರಕಾರದ ನೀತಿಯನ್ನು ಸ್ಪಷ್ಟಮಾಡುತ್ತೇನೆ. ಎಸ್‌ಸಿ ಎಸ್‌ಟಿಯವರಿಗೆ ಅನ್ಯಾಯವಾಗಿರತಕ್ಕಂಥ ಅಥವಾ ಹಿಂದುಳಿದ ವರ್ಗದವರಿಗೆ ಅನ್ಯಾಯವಾಗಿರತಕ್ಕಂಥದ್ದನ್ನು ಸರಿಪಡಿಸುತ್ತೇವೆ. ಇದು ನಮ್ಮ ಸರಕಾರದ ನೀತಿ. ನಾವು ಅದನ್ನು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ತೀರ್ಮಾನ ತೆಗೆದು ಕೊಳ್ಳುತ್ತೇವೆ.

ಕೆಲವು ಪೋಸ್ಟ್‌ಗಳು ನಮ್ಮ ಗಮನದಲ್ಲಿ ಇವೆ. ಅದನ್ನು ನಾವು ರಿವರ್ಸ್ ಕ್ಯಾಟಗರಿಯಲ್ಲಿ ತರುವ ಹಾಗೆಯೇ ಇಲ್ಲ. ಅದರೂ ಕೂಡ ಕೆಲವನ್ನು ತಂದು ಹಾಕತಕ್ಕಂಥ ಕೆಲಸವನ್ನು ಆದಷ್ಟು ಮಾಡುತ್ತಿದ್ದೇವೆ. ತಮಗೆ ಗೊತ್ತಿದೆ, ಇದರಲ್ಲಿ ನಮ್ಮ ಗಮನಕ್ಕೂ ಕೆಲವು ವಿಚಾರಗಳು ಬಂದಿದೆ. ಕೆಲವು ಹುದ್ದೆಗಳನ್ನು ಭರ್ತಿ ಮಾಡಿಲ್ಲ, ಸರಿಯಾದ ಪರ್ಸೆಂಟೇಜನ್ನು ಮೇಂಟೇನ್‌ಮಾಡಿಲ್ಲ ಎಂಬ ತಮ್ಮ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅದಕ್ಕಾಗಿಯೇ ಬ್ಯಾಕ್‌ಲಾಗ್ ಕ್ರಿಯೇಟ್ ಆಗಿರುತ್ತದೆ. ಅದು ಆಗುವವರೆಗೆ ಬೇರೆ ಏನೂ ಮಾಡುವ ಹಾಗೆ ಇಲ್ಲ ಎಂಬ ಆದೇಶವನ್ನು ನಾವು ಸ್ಪಷ್ಟವಾಗಿ ಹೊರಡಿಸಿದ್ದೇವೆ. ಮತ್ತೆ ಅದರಲ್ಲಿ ಏನಾದರೂ ವ್ಯತ್ಯಾಸ ಬಂದರೆ ಅದನ್ನು ಸರಿಪಡಿಸಿಕೊಡತಕ್ಕ ಜವಾಬ್ದಾರಿ ಸರ್ಕಾರದ್ದು., ಅದು ನಮ್ಮ ನೀತಿ, ಆ ಹೊಣೆಗಾರಿಕೆ ನಮ್ಮದು, ನಾವು ಅದನ್ನು ಸ್ಪಷ್ಟವಾಗಿ ಇಟ್ಟುಕೊಂಡು ಮುಂದಕ್ಕೆ ಹೋಗುತ್ತೇವೆ. ಮುಂದೆ ಜೆ.ಎ.ಡಿ. ಚರ್ಚೆ ಬರುತ್ತದೆ. ಆ ಸಂದರ್ಭದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ದಯಮಾಡಿ ಸಲಹೆಗಳನ್ನು ಕೊಟ್ಟರೆ ಸರ್ಕಾರ ತುಂಬು ಹೃದಯದಿಂದ ಅದನ್ನು ಸ್ವಾಗತ ಮಾಡುತ್ತದೆ. ಅದರ ಬಗ್ಗೆ ವಿವರವಾದ ಉತ್ತರವನ್ನು ತಮಗೆ ಒದಗಿಸಿಕೊಡತಕ್ಕ ಪ್ರಯತ್ನವನ್ನು ಸಹ ನಾನು ಮಾಡುತ್ತೇನೆ.

ಶ್ರೀ ಕರಿಯಣ್ಣ : ಇದರ ಬಗ್ಗೆ ತಮಗೆ ಕಾಳಜಿ ಇರುವುದನ್ನು ಕೇಳಿ ನಮಗೆ ಬಹಳ ಸಂತೋಷವಾಯಿತು. ತಾವು ಸಮಾಜ ಕಲ್ಯಾಣ ಇಲಾಖೆಯೆಂದು ಮಾಡಿದ್ದೀರಿ.

ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಷ್ಟು ಜನ ಹರಿಜನರಿಗೆ ಬ್ಯಾಕ್‌ಲಾಗ್ ಇದೆ, ಎಷ್ಟು ಜನರನ್ನು ತುಂಬಬೇಕು, ಎಷ್ಟು ಜನರನ್ನು ತುಂಬಬಾರದು ಎಂಬ ಬಗ್ಗೆ ಸ್ಟ್ಯಾಟಿಸ್ಟಿಕಲ್ ಇನ್‌ಫರ್ಮೇಷನ್ ಇಲ್ಲ. ಅವರ ಹತ್ತಿರ ಈ ವಿವರ ಇಲ್ಲ ಎಂದ ಮೇಲೆ ಈ ಇಲಾಖೆ ಏಕೆ ಇರಬೇಕು. ಈ ಇಲಾಖೆಗೆ ಹರಿಜನರ ಬಗ್ಗೆ ಒಂದಿಷ್ಟೂ ಸಂಬಂಧ ಇಲ್ಲದ ಮೇಲೆ ಈ ಇಲಾಖೆಯೇ ಏಕೆ ಆಗಬೇಕು? ಈ ಇಲಾಖೆಗೆ ಸ್ಟ್ಯಾಟಿಸ್ಟಿಕಲ್ ಇನ್‌ಫರ್ಮೇಷನ್ ಕಲೆಕ್ಟ್ ಮಾಡಿ ಭರ್ತಿ ಮಾಡುವುದಕ್ಕೆ ಪ್ರೆಶರ್ ಹಾಕುವುದಕ್ಕೆ ತಾವು ಏನಾದರೂ ಅವರಿಗೆ ಅಧಿಕಾರ ಕೊಡುತ್ತೀರಾ? ಈ ಇಲಾಖೆಗೆ ಶಕ್ತಿ ತುಂಬುತ್ತೀರಾ? ಹರಿಜನ ಗಿರಿಜನ ಬಗ್ಗೆ ಕೇಳುವುದಕ್ಕೆ ಅವರಿಗೆ ಕಾನೂನಿನ ಅವಕಾಶ ಮಾಡಿಕೊಡುತ್ತೀರಾ ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನಾನು ಹೇಳಿರತಕ್ಕ ಇಲಾಖೆಗಳು ಎಲ್ಲವೂ ಸರ್ಕಾರದ ಕಕ್ಷೆಯಲ್ಲಿರತಕ್ಕ ಇಲಾಖೆಗಳು . ಅದರಲ್ಲಿ ಈ ಸಮಾಜ ಕಲ್ಯಾಣ ಇಲಾಖೆ ಕೂಡ ಸೇರುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಕೂಡ ಅನ್ಯಾಯ ಆಗಿದೆ ಎಂಬ ಮಾತು ಬಂದರೆ, ಅದು ಹೆಚ್ಚಿನ ಗಮನ ಕೊಡುವ ಇಲಾಖೆ ಆಗುತ್ತದೆ ಎನ್ನುವ ಮಾತನ್ನು ನಾನು ಒಪ್ಪುತ್ತೇನೆ. ಆ ಇಲಾಖೆಗೆ ಸಂಬಂಧಪಟ್ಟ ವಿವರಗಳನ್ನು ಕೂಡ ನಾನು ಒದಗಿಸಿಕೊಡುತ್ತೇನೆ.

ಬೆಂಗಳೂರು ಅಭಿವೃದ್ಧಿ ನಿಧಿಗೆ 100 ಕೋಟಿ ರೂಪಾಯಿಗಳ ಯೋಜನೆ

2115 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ಮುಂಗಡ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ನಿಧಿ ಬಗ್ಗೆ 100 ಕೋಟಿ ಶಾಶ್ವತ ನಿಧಿಯನ್ನು ಕೂಡಿಸಿಕೊಡುವ ಬಗ್ಗೆ ಪ್ರಸ್ತಾಪಸಲಾಗಿತ್ತೆ?*

2) *ಹಾಗಿದ್ದಲ್ಲಿ, ಈವರೆವಿಗೆ ಸಂಗ್ರಹಿಸಲಾದ ನಿಧಿಯೆಷ್ಟು, ಹಾಗು ಇದನ್ನು ಯಾರಿಂದ ಸಂಗ್ರಹಿಸಲಾಗಿದೆ?*

3) *ಈ ಬಗ್ಗೆ ಸರ್ಕಾರದ ಮುಂದಿನ ಯೋಜನೆಗಳೇನು?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಹೌದು.

ಆ) ಇನ್ನೂ ನಿಧಿ ಸಂಗ್ರಹಿಸಿಲ್ಲ.

ಇ) ಈ ಸಂಬಂಧ ಈ ನಿಧಿಯನ್ನು ರಚಿಸಿದ ನಂತರ ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಕೆಲವು ಯೋಜನೆಗಳಾದ ಬೆಂಗಳೂರು ನಗರ ಸಾರಿಗೆ ಯೋಜನೆ, ಬೆಂಗಳೂರು ಉಪನಗರ ವರ್ತುಲ ರೈಲ್ವೆ ಯೋಜನೆಗಳಿಗೆ ನಿಧಿಯನ್ನು ತೊಡಗಿಸ ಬಹುದಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ರಾಜ್ಯದ ಮುಂಗಡ ಪತ್ರದಲ್ಲಿ ಬೆಂಗಳೂರು ಅಭಿವೃದ್ಧಿ ನಿಧಿ ಬಗ್ಗೆ 100 ಕೋಟಿ ರೂಪಾಯಿಗಳ ಶಾಶ್ವತ ನಿಧಿಯನ್ನು ಕೂಡಿಸಿಕೊಡುವ ಬಗ್ಗೆ ಪ್ರಸ್ತಾಪಿಸಿಲಾಗಿತ್ತೇ ಎಂಬ ಪ್ರಶ್ನೆಗೆ ಹೌದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ಹಾಗಿದ್ದಲ್ಲಿ ಈವರೆವಿಗೆ ಸಂಗ್ರಹಿಸಲಾದ ನಿಧಿಯೆಷ್ಟು ಹಾಗೂ ಇದನ್ನು ಯಾರಿಂದ ಸಂಗ್ರಹಿಸಲಾಗಿದೆ ಎಂದು ಕೇಳಿದ್ದಕ್ಕೆ ಇನ್ನೂ ನಿಧಿ ಸಂಗ್ರಹಿಸಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ಒಂದು ಕಾಲದಲ್ಲಿ ಸುಂದರವಾದ ನಗರ ಆಗಿದ್ದ ಬೆಂಗಳೂರು ಇವತ್ತಿನ ದಿನ ಹಾಳು ಕೊಂಪೆಯಾಗಿದೆ. ಇದು ಕೇವಲ ಅಶ್ವಾಸನೆಯಾಗಿ ಉಳಿಯಬಾರದು. ಮುಖ್ಯ ಮಂತ್ರಿಗಳು ತುಂಬಾ ಮುಂದಾಲೋಚನೆ ಮಾಡಿ ಬೆಂಗಳೂರಿನ ಅಭಿವೃದ್ಧಿ ದೃಷ್ಟಿಯಿಂದ